ಅನುಪಮಾ ಪ್ರಸಾದ್ ಕಥೆಗಾರ್ತಿ, ಕಾದಂಬರಿಗಾರ್ತಿ. ಹುಟ್ಟಿದ್ದು ಶಿರಸಿಯಲ್ಲಿ. ಓದಿದ್ದು ದಕ್ಷಿಣ ಕನ್ನಡದ ಉಜಿರೆಯಲ್ಲಿ. ವಿವಾಹದ ಬಳಿಕ ಕಾಸರಗೋಡು ನಿವಾಸಿಯಾದರು. ಪ್ರಸ್ತುತ ಬೆಂಗಳೂರುವಾಸಿ. 'ಚೇತನ', 'ಕರವೀರದ ಗಿಡ', 'ದೂರತೀರ', 'ಜೋಗತಿ ಜೋಳಿಗೆ' ಅವರ ಕಥಾಸಂಕಲನಗಳು. 'ಪಕ್ಕಿಹಳ್ಳದ ಹಾದಿಗುಂಟ' ಅವರ ಪ್ರಸಿದ್ಧ ಕಾದಂಬರಿ. 'ಕೆನ್ನೀರು', 'ಮನಸ್ಸು ಮಾಯೆಯ ಹಿಂದೆ' ನಾಟಕ ಕೃತಿಗಳು.

ಭಾಂಡಗೆಯಲ್ಲಿ ಕುದಿಯುತ್ತಿದ್ದ ಅನ್ನದೊಳಗೆ ಬಿದ್ದಂತೆ ಕೊತಕೊತನೆ ಬೇಯುತ್ತಿದ್ದ ಎದೆ ಅಷ್ಟು ಸುಲಭದಲ್ಲಿ ತಣಿಯುವುದು ಸಾಧ್ಯವಿರಲಿಲ್ಲ. ಕಾಲು ಸಾಗಿದ್ದು ಕಲ್ಯಾಣಿಯ ತಟಕ್ಕೆ. ಕುಳಿತುಕೊಳ್ಳುವುದನ್ನೂ ಮರೆತು ಶತಪಥ ಸುತ್ತುತ್ತಿದ್ದವನ ಕಣ್ಣೊಳಗೆ; ಎದೆಯೊಳಗೆ; ನರನರಗಳೊಳಗೆ ಕಲ್ಯಾಣಿ ಸದ್ದಿಲ್ಲದೆ ಇಳಿಯುತ್ತಿದ್ದಂತೆ ಬಸವಣ್ಣ ತಾನೇ ತಾನಾಗಿ ಕಲ್ಯಾಣಿಯ ತಟದಲ್ಲಿ ಕುಳಿತ. ಕೂರಂಬುವಿನ ಮಾತು ಒಗೆದು ಎಷ್ಟೊಂದು ನೋಯಿಸಿಬಿಟ್ಟನಲ್ಲ ಅವನು. ಹೆಗಲು ಕೊಡುವ ಗೆಳೆಯನಾಗಿದ್ದವ! ಜೀವ ಮೀಟುವ ಗೆಳೆಯನಾಗಿದ್ದವ! ನೀನೆನ್ನ ಗುರು ಅನ್ನುತ್ತಿದ್ದವ ಹೀಗೆ ಹೆರವರ ಮಾತು ಕೇಳಿ ಬುದ್ಧಿಗೇಡಿಯಾಗಿ ಮತಿಗೆಡಬಹುದೆ? ಎಂತಹ ಅಪನಂಬುಗೆಯ ಮಾತುಗಳು ಅವು. ಶಿವ ಶಿವ ಎರಕವನ್ನೇ ಹೊಯ್ದಿದ್ದರೂ ಸಹಿಸಿಕೊಳ್ಳಬಹುದಿತ್ತು. ಕೆಡಿಸಿಬಿಟ್ಟರು ಅವನನ್ನು ಕಿಡಿಗೇಡಿಗಳು. ಬಸವಣ್ಣನಿಗೆ ಮೋಸಗಾರರ ಬಲೆಗೆ ಬಿದ್ದ ಗೆಳೆಯನ ಮೇಲೆ ಆ ಕ್ಷಣವೇ ಅನುಕಂಪ ಉಕ್ಕಿತು. ಮತ್ತೆ ಅವನ ಮನೆಯತ್ತ ಹೋಗುವ ತುಡಿತ ಎದೆಯ ಮೂಲೆಯಲ್ಲೆಲ್ಲೊ ಹುಟ್ಟಿಕೊಂಡಿತು. ಮರುಕ್ಷಣವೇ ಜ್ಞಾನೋದಯವಾದಂತೆ, ಅಲ್ಲಾ, ಮಾತು ಕೇಳಿ ಕೆಟ್ಟನೋ ಅಥವಾ ಅವನಲ್ಲಿ ಹೆಡೆಯೆತ್ತುತ್ತಿರುವ ಶ್ರೇಷ್ಠತ್ತಿಗೆಯ ಅಹಮಿಕೆಗೆ ಆ ಜನರ ಮಾತು ಮತ್ತಷ್ಟು ಇಂಬು ಕೊಟ್ಟದ್ದೊ... ಅವನ ನಂಬಿ ನಾನು ಕೆಟ್ಟೆನಾ... ಅನ್ನುವ ಜಿಜ್ಞಾಸೆ ಹುಟ್ಟಿಕೊಂಡಿತು. ನಾನು ನಂಬಿ ಕೆಟ್ಟೆನಾದರೂ ನಂಬಿದ್ದಕ್ಕೆ ತಾನೇ ನನ್ನ ಜನಗಳಿಗಾಗಿ ಇಷ್ಟಾದರೂ ಸಾಧಿಸಲು ಸಾಧ್ಯವಾಗಿದ್ದು... ಹೊದೆಸಿದ್ದ ಅವಕುಂಠನ ಹಾರಿ ಹೋಗಿದ್ದರಿಂದ ತೆಂಕಣ ಸೀಮೆಯ ದೊರೆಗಳ 'ರಾಜಗುರು'ವಿನ ಕನಸು ಕೆಟ್ಟಿತು. ಬಸವಣ್ಣನ ಜಿಜ್ಞಾಸೆ ತಾರ್ಕಿಕ ಅಂತ್ಯ ಕಂಡುಕೊಳ್ಳುವುದರೊಳಗೆ ಕಲ್ಯಾಣಿಯೊಳಗೆ ಕರಗಿದಂತಾಯ್ತು.

'ತತ್ತೇರಿಕೆ... ಈ ಮೂಡು ಗಾಳಿ ಈಗಲೆ ಬೀಸಿ ಎಲ್ಲ ಕೆಡಿಸಿತು... ಬಸವನೇನೊ ಎದುರಾದ ಸಂಕಟಕ್ಕೆ ನೇರವಾಗಿ ತಲೆಕೊಟ್ಟ. ಆದರೆ, ಈ ದೊರೆಯ ಕೈಯಲ್ಲಿ ನಾನು ಶಾಶ್ವತವಾಗಿ ಗೃಹ ಬಂಧನದಲ್ಲುಳಿಯುವಂತಾಯ್ತು... ತಾನು ಈ ದೊರೆಯ ಕೈವಶವಾಗಿದ್ದು ಅಚಾನಕ್ಕಾಗಿ. ಏನಾಗುತ್ತಿದೆಯೆಂದು ಅರ್ಥವಾಗುವುದರೊಳಗೆ ಆ ಮಹಾ ಸನ್ಯಾಸಿ ನಾನು ಇರಲಿ ಇಲ್ಲದಿರಲಿ ಇನ್ನು ಮುಂದೆ ನಿಂಗೆ ದಾರಿ ತೋರಿಸಲು ಸದಾ ನಿನ್ನ ಜೊತೆಗೇ ಇರಲಿ ಅನ್ನುತ್ತ ತನ್ನನ್ನು ದೊರೆಯ ವಶಕ್ಕೆ ಬಿಟ್ಟುಕೊಟ್ಟು ನಡೆದಿದ್ದ. ಇವನೊ ಸಿಂಹಾಸನದ ಮೇಲೆ ಕಣ್ಣು ನೆಡುವ ಮೊದಲು, ನೀವೇ ನನ್ನ ಗುರು... ಗೆಳೆಯ... ಮಾರ್ಗದರ್ಶಕ ಅನ್ನುತ್ತಿದ್ದ. ಈಗ?

ಪೀಠಾಧಿಪತಿಯಾಗುವ ಮೊದಲು ಪೂರ್ವಾಶ್ರಮದಲ್ಲಿ ಈ ಬಸವನ ಬಗ್ಗೆ, ಬಿಜ್ಜಳನ ಬಗ್ಗೆ ಎಷ್ಟೆಲ್ಲ ಮಥಿಸುತ್ತಿದ್ದ ನನ್ನೊಡನೆ. ಪೂರ್ವಾಶ್ರಮದಲ್ಲಿದ್ದಾಗ ನೀನು ಸಿಕ್ಕಿದ್ದು ನನ್ನ ಭಾಗ್ಯ... ನನಗೆ ನೀನೇ ಬಸವ, ಗುರು. ಆದರೆ, ನಾನೆಂದು ಬಿಜ್ಜಳನಂತೆ ಕುರುಡನಾಗಲಾರೆ ಎಂದೆಲ್ಲ ಹೇಳುತ್ತಿದ್ದವನಿಗೆ ತೆಂಕಣ ದೇಶದ ಪೀಠದ ವಾಸನೆ ಮೂಗಿಗೆ ಬಡಿದಿದ್ದೇ ನಶೆ ಏರತೊಡಗಿತು. ನನ್ನ ಭೇಟಿಗೆ ಬಂದಾಗ ಮಾತ್ರ ತಾನು ಹೋಗುತ್ತಿರುವ ದಾರಿ ಬಗ್ಗೆ ಬೇಡಬೇಡವೆಂದರೂ ಅವನೊಳಗೆ ಅವಲೋಕನ ಸುರುವಾಗುತ್ತಿತ್ತು. ಆದರೂ, ಮೆಲ್ಲ ಮೆಲ್ಲ ನನ್ನ ಮಾತು ಅಪಥ್ಯವಾಗಲಾರಂಭಿಸಿತು. ದಾರಿ ಕವಲೊಡೆದು ದೂರ ಸಾಗುತ್ತಿದೆಯೆಂಬ ಸುಳಿವು ಸಿಕ್ಕಿದ್ದು, ನ್ಯಾಯದ ರಕ್ತವನ್ನು ರಸ್ತೆ ಮೇಲೆ ಚೆಲ್ಲುತ್ತ ಆ ರಕ್ತದಲ್ಲಿ ಕೈ ತೊಳೆದುಕೊಳ್ಳುವ ಗುತ್ತಿಗೆದಾರನನ್ನ ತನ್ನ ಕೋಶಾಧಿಕಾರಿಯಾಗಿ ನೇಮಿಸಿಕೊಂಡಿದ್ದು ತಿಳಿದಾಗ. ಎದುರು ಕುಳಿತವನಿಗೆ ನಾನು ತೋರಿಸುತ್ತಿರುವ ಸತ್ಯ ಕಾಣಿಸುತ್ತಿತ್ತು. ಆದರೆ, ಅದನ್ನು ಒಳಗಿಳಿಸಿಕೊಂಡರೆ ಪೀಠಾಧಿಪತಿಯಾಗಿರಲು ಸಾಧ್ಯವಿಲ್ಲ ಗುರುವೇ ಎಂದು ನಿಗೂಢವಾಗಿ ತಣ್ಣಗೆ